# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1597 |
| 3 | ಉತ್ತರಿಸಬೇಕಾದ ದಿನಾಂಕ | : | 21-03-2025 |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಈ ಸಾಲಿನಲ್ಲಿ ಮನರೇಗಾ ಯೋಜನೆಗೆ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಲಾಗುತ್ತಿದೆಯೇ; ಈ ವರೆಗೆ ಎಷ್ಟು ಅರ್ಜಿಗಳು ಸ್ವೀಕೃತವಾಗಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಈ ಸಾಲಿನಲ್ಲಿ ಸಾರ್ವಜನಿಕರಿಂದ ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ರಾಜ್ಯ ಸರ್ಕಾರದ ಸಬ್ಸಿಡಿ ಪಡಿತರ (Ration Benefits) ಯೋಜನೆ ವಿಜಯಪುರ ಜಿಲ್ಲೆಯಲ್ಲಿ ಸೂಕ್ತವಾಗಿ ಜಾರಿಗೆ ತರುವ ಕುರಿತು ಇಲಾಖೆಯ ವರದಿ ಏನು;</td><td>ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯವರು ಒದಗಿಸಿರುವ ಮಾಹಿತಿಯಂತೆ, ವಿಜಯಪುರ ಜಿಲ್ಲೆಯಲ್ಲಿ ವಿಜಯಪುರ ಮಹಾನಗರ ಪಾಲಿಕೆ ಸೇರಿದಂತೆ ಒಟ್ಟು 13 ತಾಲ್ಲೂಕುಗಳು ಇದ್ದು, ಜಿಲ್ಲೆಯಲ್ಲಿ ಅಂತ್ಯೋದಯ ಅನ್ನ ಯೋಜನೆಯ 41141, ಪಿಎಚ್ಎಚ್ (ಬಿಪಿಎಲ್) 468850 ಹಾಗೂ ಎನ್‌ಪಿಎಚ್‌ಎಚ್(ಎಪಿಎಲ್) 89403 ಹೀಗೆ ಒಟ್ಟು 599394 ಪಡಿತರ ಚೀಟಿಗಳು ಇರುತ್ತವೆ. ಈ ಎಲ್ಲಾ ಪಡಿತರ ಚೀಟಿಗಳು ಜಿಲ್ಲೆಯಲ್ಲಿನ ಒಟ್ಟು 889 ನ್ಯಾಯ ಬೆಲೆ ಅಂಗಡಿಗಳಿಗೆ ನಿಯೋಜಿಸಲ್ಪಟ್ಟಿರುತ್ತವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
<table>
<tr><th>Taluk Name</th><th>AAY RCs</th><th>NPHH RCs</th><th>PHH RCs</th><th>TOTAL RCs</th><th>No of Fair Price Shops</th></tr>
<tr><td>BASAVANA BAGEVADI</td><td>4784</td><td>8316</td><td>33741</td><td>46841</td><td>63</td></tr>
<tr><td>VIJAYAPURA</td><td>4494</td><td>28842</td><td>90742</td><td>124078</td><td>134</td></tr>
<tr><td>INDI</td><td>5660</td><td>10007</td><td>67177</td><td>82844</td><td>120</td></tr>
<tr><td>MUDDEBIHAL</td><td>5173</td><td>6584</td><td>35594</td><td>47351</td><td>101</td></tr>
<tr><td>SINDGI</td><td>2898</td><td>2376</td><td>36002</td><td>41276</td><td>74</td></tr>
<tr><td>NIDAGUNDI</td><td>2209</td><td>2848</td><td>15437</td><td>20494</td><td>38</td></tr>
<tr><td>KOLHAR</td><td>1849</td><td>3261</td><td>17150</td><td>22260</td><td>31</td></tr>
<tr><td>BABALESHWAR</td><td>1832</td><td>6662</td><td>31563</td><td>40057</td><td>52</td></tr>
<tr><td>CHADACHAN</td><td>2110</td><td>4076</td><td>29070</td><td>35256</td><td>46</td></tr>
<tr><td>DEVARA HIPPARAGI</td><td>2476</td><td>3229</td><td>26558</td><td>32263</td><td>53</td></tr>
<tr><td>TALIKOTI</td><td>3073</td><td>5097</td><td>27037</td><td>35207</td><td>62</td></tr>
<tr><td>TIKOTA</td><td>2507</td><td>6470</td><td>32041</td><td>41018</td><td>67</td></tr>
<tr><td>ALMEL</td><td>2076</td><td>1635</td><td>26738</td><td>30449</td><td>49</td></tr>
<tr><td>TOTAL</td><td>41141</td><td>89403</td><td>468850</td><td>599394</td><td>890</td></tr>
</table>
> ಜಿಲ್ಲೆಯಲ್ಲಿನ ಎಲ್ಲಾ ನ್ಯಾಯ ಬೆಲೆ ಅಂಗಡಿಗಳ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈ ಜಾಗೃತ ಸಮಿತಿ ಸದಸ್ಯರುಗಳು ನ್ಯಾಯ ಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ನೀಡಿ ಪಡಿತರ ವಸ್ತುಗಳನ್ನು ಪಡೆಯುವಾಗ ಹಾಜರಿದ್ದು ಪಡಿತರ ವಸ್ತುಗಳ ವಿತರಣೆಯ ವೀಕ್ಷಣೆಯನ್ನು ಮಾಡುತ್ತಾರೆ.</td></tr>
</table>

> ಜಿಲ್ಲೆಯಲ್ಲಿನ ಎಲ್ಲಾ 13 ತಾಲ್ಲೂಕುಗಳಲ್ಲಿ 5 ಆಹಾರ ಶಿರಸ್ತೇದಾರರ ಹುದ್ದೆಗಳು ಹಾಗೂ 28 ಆಹಾರ ನಿರೀಕ್ಷಕರ ಹುದ್ದೆಗಳು ಇವೆ, ಈ ಪೈಕಿ ಆಹಾರ ನಿರೀಕ್ಷರು ಕಾರ್ಯನಿರ್ವಹಿಸುತ್ತಿದ್ದು, ಇವರು ಪಡಿತರ ವಸ್ತುಗಳ ವಿತರಣೆ ಮೇಲ್ವಿಚಾರಣೆಯನ್ನು ಮಾಡುತ್ತಾರೆ.

> ವಿಜಯಪುರ ಕೇಂದ್ರ ಸ್ಥಾನದಲ್ಲಿ ಭಾರತ ಆಹಾರ ನಿಗಮದ ಗೋದಾಮು (ವಿತರಣಾ ಕೇಂದ್ರ) ಇದ್ದು, ಇಲ್ಲಿಂದಲೇ ಗುಣಮಟ್ಟದ ಆಹಾರ ಧಾನ್ಯಗಳು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ಕೆಎಫ್‌ಸಿಎಸ್ ಸಿ ಸಗಟು ಮಳಿಗೆಗಳಿಗೆ ಸಗಟು ಸಾಗಾಣಿಕೆ ಗುತ್ತಿಗೆದಾರರ ಮೂಲಕ ಆಹಾರ ಧಾನ್ಯ ಸಾಗಾಣಿಕೆಯಾಗುತ್ತಿದೆ. ಅಲ್ಲದೇ ನ್ಯಾಯ ಬೆಲೆ ಅಂಗಡಿಗಳಿಗೆ ಆಯಾ ತಾಲ್ಲೂಕು ಸಗಟು ಮಳಿಗೆಯಿಂದ ನಿರ್ದಿಷ್ಟಪಡಿಸಿದ ಸಾಗಾಣಿಕ ಗುತ್ತಿಗೆದಾರರ ವಾಹನ ಲಾರಿಗಳ ಮೂಲಕ ಆಯಾ ನ್ಯಾಯ ಬೆಲೆ ಅಂಗಡಿಗಳಿಗೆ ಪಡಿತರ ವಸ್ತುಗಳಾದ ಅಕ್ಕಿಯನ್ನು ಸಾಗಾಣಿಕೆ ಮಾಡಲಾಗುತ್ತಿದೆ.

> ನ್ಯಾಯ ಬೆಲೆ ಅಂಗಡಿಗಳು ಬೆಳಿಗ್ಗೆ 7-00 ಗಂಟೆಯಿಂದ ಮಧ್ಯಾಹ್ನ 2-00, ಸಾಯಂಕಾಲ 4-00 ಗಂಟೆಯಿಂದ ರಾತ್ರಿ 8-00 ಗಂಟೆಯ ವರೆಗೆ ಕಾರ್ಯನಿರ್ವಹಣೆ ಅವಧಿಯನ್ನು ನಿಗದಿಪಡಿಸಲಾಗಿರುತ್ತದೆ. ಪಡಿತರ ವಸ್ತುಗಳು ಸಗಟು ಮಳಿಗೆಯಿಂದ ಸಾಗಾಣಿಕೆಯಾದ ಕೂಡಲೇ ಬಯೋಮೆಟ್ರಿಕ್ ಪಡೆದುಕೊಂಡು ತಿಂಗಳಾಂತ್ಯದ ವರೆಗೆ ಪಡಿತರ ವಸ್ತುಗಳನ್ನು ವಿತರಣೆ ಮಾಡುತ್ತಾರೆ.

> ಪಡಿತರ ವಸ್ತುಗಳ ವಿಚಕ್ಷಣಾ ಕ್ರಮದಲ್ಲಿ ಲೋಪವನ್ನು ಎಸಗಿರುವ ನ್ಯಾಯ ಬೆಲೆ ಅಂಗಡಿಗಳ ವಿರುದ್ಧ ಕ್ರಮಕ್ಕಾಗಿ ಅಗತ್ಯ ವಸ್ತುಗಳ(ಸಾವಿಪ) ನಿಯಂತ್ರಣ ಆದೇಶ 2016 ರಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಕಳೆದ 2 ವರ್ಷದಲ್ಲಿ ಪಡಿತರ ವಸ್ತುಗಳ ವಿತರಣೆ ಮತ್ತು ನ್ಯಾಯ ಬೆಲೆ ಅಂಗಡಿ ನಿರ್ವಹಣೆಯಲ್ಲಿ ಲೋಪವನ್ನು ಎಸಗಿರುವ ಸುಮಾರು 27 ನ್ಯಾಯ ಬೆಲೆ ಅಂಗಡಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆಯ ಪ್ರತಿ ಮಾಹೆ ಪ್ರತಿ ಕಾರ್ಡಿಗೆ **35 ಕೆ.ಜಿ** ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ರಾಗಿ ಮತ್ತು ಜೋಳವನ್ನು ಲಭ್ಯತೆಗನುಗುಣವಾಗಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ **21 ಕೆ.ಜಿ. ಅಕ್ಕಿಯೊಂದಿಗೆ 14 ಕೆ.ಜಿ ರಾಗಿ/ ಜೋಳದಂತೆ** ಹಂಚಿಕೆ ಮಾಡಲಾಗುತ್ತಿದೆ.

ಆದ್ಯತಾ ಪಡಿತರ ಚೀಟಿಯ ಪ್ರತಿ ಮಾಹೆ ಪ್ರತಿ ಸದಸ್ಯರಿಗೆ 5 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಉಚಿತವಾಗಿ ಮಾಡಲಾಗುತ್ತಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ರಾಗಿ ಮತ್ತು ಜೋಳವನ್ನು ಲಭ್ಯತೆಗನುಗುಣವಾಗಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ **3 ಕೆ.ಜಿ. ಅಕ್ಕಿಯೊಂದಿಗೆ 02 ಕೆ.ಜಿ ರಾಗಿ/ ಜೋಳದಂತೆ** ಹಂಚಿಕೆ ಮಾಡಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಆನಾಸ/199/ಡಿಆರ್ಎ/2023(ಇ-ಆ) ದಿನಾಂಕ: 19-02-2025 ರಲ್ಲಿ ಪ್ರಸ್ತುತ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿ (PHH) ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯ ಬದಲಾಗಿ ಫೆಬ್ರುವರಿ 2025 ರ ಮಾಹೆಯಿಂದ ಅರ್ಹ ಫಲಾನುಭವಿಗಳಿಗೆ 05 ಕೆ.ಜಿ ಅಕ್ಕಿಯನ್ನು ವಿತರಿಸಲು ಆದೇಶಿಸಲಾಗಿದೆ.

ಆದ್ಯತೇತರ (ಎಪಿಎಲ್) ಪಡಿತರ ಚೀಟಿಗೆ ಆಹಾರ ಧಾನ್ಯ ಹಂಚಿಕೆ ಇರುವುದಿಲ್ಲ.

ಸರ್ಕಾರ ಸಬ್ಸಿಡಿ ಮೂಲಕ ಉಚಿತವಾಗಿ ನೀಡಲಾಗುತ್ತಿರುವ ಪಡಿತರ ವಸ್ತುಗಳು ಸಮರ್ಪಕವಾಗಿ ಆಯಾ ಫಲಾನುಭವಿಗಳಿಗೆ

| | | |
|---|---|---|
| | | ವಿತರಣೆಯಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಮತ್ತು ಇಲಾಖೆಯ ದತ್ತಾಂಶದಲ್ಲಿ ಎಲ್ಲಾ ಮಾಹಿತಿಯನ್ನು ಸಾರ್ವಜನಿಕವಾಗಿ ನೀಡಲಾಗಿರುತ್ತದೆ. |
| ಇ) | ವಿಜಯಪುರ ಜಿಲ್ಲೆಯಲ್ಲಿ ಮಹಿಳಾ ಕಾರ್ಮಿಕರಿಗಾಗಿ ಇರುವ ವಿಶೇಷ ಕಲ್ಯಾಣ ಯೋಜನೆಗಳಾವುವು; ಬಾಲ ಕಾರ್ಮಿಕರ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | **ಆಯುಕ್ತರು, ಕಾರ್ಮಿಕ ಇಲಾಖೆ, ರವರು ಒದಗಿಸಿರುವ ಮಾಹಿತಿಯಂತೆ**, ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳಲ್ಲಿ ವಿಜಯಪುರ ಜಿಲ್ಲೆಯು ಸೇರಿದಂತೆ ರಾಜ್ಯದ್ಯಂತ ಮಹಿಳಾ ಕಾರ್ಮಿಕರಿಗಾಗಿ ಇರುವ ವಿಶೇಷ ಕಲ್ಯಾಣ ಯೋಜನೆಗಳು ಮತ್ತು ಬಾಲಕಾರ್ಮಿಕರ ನಿಯಂತ್ರಣಕ್ಕಾಗಿ ತೆಗೆದುಕೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**<br><br>ಈ ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಸೌಲಭ್ಯಗಳನ್ನು ನೋಂದಾಯಿತ ಮಹಿಳಾ ಕಾರ್ಮಿಕರು ಪಡೆಯಲು ಅರ್ಹರಿರುತ್ತಾರೆ. ಮಂಡಳಿಯು ರೂಪಿಸಿರುವ ಸೌಲಭ್ಯಗಳ ವಿವರವನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.<br><br>ಸದರಿ ಸೌಲಭ್ಯಗಳಲ್ಲಿ ಮಹಿಳೆಯರಿಗಾಗಿ ರೂಪಿಸಿರುವ ವಿಶೇಷ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ:<br>1. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/- ಗಳ ಸಹಾಯಧನ.<br>2. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ. 50,000/-.<br><br>**ಬಾಲ ಕಾರ್ಮಿಕ ಯೋಜನೆ ಸೊಸೈಟಿ:**<br><br>ಬಾಲಕಾರ್ಮಿಕರ ನಿಯಂತ್ರಣಕ್ಕಾಗಿ ಸರ್ಕಾರವು ಈ ಕೆಳಕಂಡ ಪ್ರಮುಖ ಕ್ರಮಗಳನ್ನು ಕೈಗೊಂಡಿರುತ್ತದೆ;<br><br>• ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯನ್ನು ಸ್ಥಾಪಿಸಿದ್ದು, ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ನಿಯಮಗಳು (ಕೇಂದ್ರ/ರಾಜ್ಯ) ಹಾಗೂ ಎಸ್.ಓ.ಪಿ (ಕೇಂದ್ರ/ರಾಜ್ಯ) ಯನ್ನು ಪರಿಣಾಮಕಾರಿ ಅನುಷ್ಠಾನ ಮಾಡುವುದು.<br>• ಜಿಲ್ಲಾ ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರ್ಯಪಡೆ (Task Force) ಯನ್ನು ರಚಿಸಲಾಗಿದೆ.<br>• ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ, ಕಾರ್ಯಕಾರಿ ಸಮಿತಿಗಳನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕತೆ ನಿರ್ಮೂಲನೆ ಹಾಗೂ ಪುನರ್ವಸತಿ ಸಮಿತಿಗಳನ್ನು ರಚಿಸಲಾಗಿರುತ್ತದೆ.<br><br>• ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಕಲಂ 17ರಡಿ ಸರ್ಕಾರದ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ ಪ್ರತಿಯೊಂದು ತಂಡವೂ ಮಾಸಿಕ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳಲು ನಿರ್ದೇಶನ ನೀಡಲಾಗಿದ್ದು, ತಪಾಸಣೆಗಳಲ್ಲಿ /ದಾಳಿಗಳಲ್ಲಿ ಪತ್ತೆಯಾದ ಬಾಲಕಾರ್ಮಿಕರನ್ನು ಮಕ್ಕಳ ಕಲ್ಯಾಣ ಸಮಿತಿ (Child Welfare Committee) ಯ ಬಾಲಕರ ಮತ್ತು ಬಾಲಕಿಯರ ಬಾಲಮಂದಿರಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ |

| | | |
|---|---|---|
| | | ಇಲಾಖೆಯ ವಸತಿ ಶಾಲೆಗಳಿಗೆ, ಮುಖ್ಯವಾಹಿನಿ ಶಾಲೆಗಳಲ್ಲಿ ಮಕ್ಕಳ ಅರ್ಹತೆಗನುಗುಣವಾಗಿ ದಾಖಲು ಮಾಡಲು ಕ್ರಮ ಕೈಗೊಳ್ಳುವುದು.<br><br>ವಿಜಯಪುರ ಜಿಲ್ಲೆಯಲ್ಲಿ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯ ನಿರ್ಮೂಲನೆ ಮಾಡಿ ಜಿಲ್ಲೆಯನ್ನು ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ಮಾಡಲು ವ್ಯಾಪಕವಾದ ಜಾಗೃತಿ ಮೂಡಿಸಲಾಗುತ್ತಿದೆ. ಗೋಡೆ ಬರಹಗಳು, ಕರಪತ್ರಗಳು, ಆಟೋ ಪ್ರಚಾರಗಳು, ತರಬೇತಿ ಕಾರ್ಯಾಗಾರಗಳು, ಬಿತ್ತಿ ಪತ್ರಗಳು, ಬೀದಿನಾಟಕಗಳು ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮಗಳ ನಿರಂತರ ಆಯೋಜನ ಹಾಗೂ ಸಾಂಪ್ರದಾಯಿಕ ಮಾಧ್ಯಮಗಳು ಹಾಗೂ ಆಧುನಿಕ ವಿದ್ಯುನ್ಮಾನ/ ಮುದ್ರಣ ಮಾಧ್ಯಮಗಳನ್ನು ಬಳಸಿಕೊಂಡು ಈ ಬಗ್ಗೆ "ಅರಿವು-ನೆರವು' ಕಾರ್ಯವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದೆ.<br><br>ವಿಜಯಪುರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 2935 ತಪಾಸಣೆಗಳನ್ನು ನಡೆಸಿ 48 ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಲಾಗಿರುತ್ತದೆ ಹಾಗೂ ಬಾಲ ಕಾರ್ಮಿಕರನ್ನು ನೇಮಿಸಿಕೊಂಡು ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ರಡಿ ಪ್ರಾವಧಾನಗಳನ್ನು ಉಲ್ಲಂಘನೆ ಮಾಡಿದ ಮಾಲೀಕರ ವಿರುದ್ಧ ಒಟ್ಟು 74 ಮೊಕದ್ದಮೆಗಳನ್ನು ಸಕ್ಷಮ ನ್ಯಾಯಾಲಯಗಳಲ್ಲಿ ದಾಖಲಿಸಲಾಗಿರುತ್ತದೆ. ತಪ್ಪಿತಸ್ಥ ಮಾಲೀಕರಿಗೆ ಮಾನ್ಯ ನ್ಯಾಯಾಲಯಗಳು ರೂ. 30,000/- ಗಳ ದಂಡ ವಿಧಿಸಿರುತ್ತವೆ.<br><br>**ಕಾರ್ಮಿಕ ಕಲ್ಯಾಣ ಮಂಡಳಿ:**<br>ಈ ಮಂಡಳಿಯಿಂದ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ವಂತಿಗೆ ಪಾವತಿಸುವ ಸಂಘಟಿತ ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯವನ್ನು ಮೊದಲ ಎರಡು ಮಕ್ಕಳಿಗೆ ನೀಡಲಾಗುತ್ತದೆ. |
| ಈ) | ಸದರಿ ಜಿಲ್ಲೆಯಲ್ಲಿ ಮಹಿಳಾ ಕಾರ್ಮಿಕರ ಸುರಕ್ಷತೆ, ವಸತಿ ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆಯೇ; ಸರ್ಕಾರ ಈ ಬಗ್ಗೆ ನಿರ್ದಿಷ್ಟ ತೀರ್ಮಾನ ತೆಗೆದುಕೊಂಡಿದೆಯೇ; ಕಿರಿಯ ಕಾರ್ಮಿಕರಿಗೆ (Apprenticeship & Skill Training) ವಿಜಯಪುರದಲ್ಲಿ ಕಾರ್ಯಾಚರಿಸುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಪರಿಣಾಮಕಾರಿತ್ವ ಹೇಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು) | **ನಿರ್ದೇಶಕರು, ಕಾರ್ಖಾನೆ, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು** ರವರು ಒದಗಿಸಿರುವ ಮಾಹಿತಿಯಂತೆ, ವಿಜಯಪುರ ಜಿಲ್ಲೆಯಲ್ಲಿ ಕಾರ್ಖಾನೆಗಳ ಕಾಯ್ದೆ 1948 ರ ಅಡಿಯಲ್ಲಿ ಒಟ್ಟು 119 ಕಾರ್ಖಾನೆಗಳು ನೋಂದಣಿಯಾಗಿದ್ದು, ಇವುಗಳ ಪೈಕಿ 85 ರಲ್ಲಿ ಸುಮಾರು 1215 ಮಹಿಳಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಕಾರ್ಖಾನೆಗಳಲ್ಲಿ ಸುರಕ್ಷಿತ ಮತ್ತು ಶೌಚಾಲಯಗಳ ವ್ಯವಸ್ಥೆ ಕುರಿತು ಇಲಾಖಾಧಿಕಾರಿಗಳು ಪರಿವೀಕ್ಷಣೆಯ ಸಮಯದಲ್ಲಿ ಪರಿಶೀಲಿಸುತ್ತಿರುತ್ತಾರೆ ಮತ್ತು ಈ ಕುರಿತು ಯಾವುದೇ ದೂರುಗಳು ಸ್ವೀಕೃತಿಯಾಗಿರುವುದಿಲ್ಲ.<br><br>ಮುಂದುವರೆದು ಕಾರ್ಯಾಚರಿಸುತ್ತಿರುವ ಕೇಂದ್ರಗಳ ಸಂಖ್ಯೆ ಮತ್ತು ಅವುಗಳ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದ ವಿಷಯವು ಕಾರ್ಮಿಕ ಇಲಾಖೆ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಮಾಹಿತಿ ಲಭ್ಯವಿರುವುದಿಲ್ಲ. |

**ಸಂಖ್ಯೆ: ಗ್ರಾಅಪ/121(24)/ಉಖಾಯೋ/2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು